ಅಧ್ಯಕ್ಷರು.—ಅರ್ಜಿಗಳನ್ನು ಸದನದ ಮುಂದೆ ಒಪ್ಪಿಸಲಾಯಿತು. ಈಗ ಶ್ರೀ ಕೆ. ಹೆಚ್. ಶ್ರೀ ನಿವಾಸ್‌ರವರು ವರದಿಯನ್ನು ಒಪ್ಪಿಸುವುದು.

ವರದಿಗಳನ್ನೊಪ್ಪಿಸುವುದು

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ೧) ಹೊಸ ಸೇವೆಗಳ ಮೇಲಿನ ವೆಚ್ಚದ ಬಗ್ಗೆ ೨೨ನೇ ವರದಿ, ೨) ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ೧೨ನೇ ವರದಿಯಲ್ಲಿ ಮಾಡಲಾದ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮದ ಬಗ್ಗೆ ೨೩ನೇ ವರದಿ, ೩) ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ೪ನೇ ವರದಿಯಲ್ಲಿ ಮಾಡಿದ್ದ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದು ಕೊಂಡು ಕ್ರಮದ ಬಗ್ಗೆ ೨೪ನೇ ವರದಿ ಹಾಗೂ ೪) ವ್ಯವಸಾಯ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ೩ನೇ ವರದಿಯಲ್ಲಿ ಮಾಡಿದ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮದ ಬಗ್ಗೆ ೨೫ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಯ ಮುಂದೆ ಒಪ್ಪಿಸಲಾಯಿತು.

೨. ೦೦ ಪಿ. ಎಂ

ಅಧ್ಯಕ್ಷರು.—ಈಗ ಕಾಲಿಂಗ್ ಅಟೆನೆಷನ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೆ. ಈ ರಾಜ್ಯದಲ್ಲಿ ಹರಿಜನರ ಮೇಲೆ ಅಟ್ರಾಸಿಟಿಸ್ ನಡೆಯುತ್ತಲೇ ಇದೆ.

ಅಧ್ಯಕ್ಷರು.—ನಿಮ್ಮ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾಲಿಂಗ್ ಅಟೆನ್‌ಷನ್ ಬೆಂಡಿಗೆರೆಗೆ ಸಂಬಂಧ ಪಟ್ಟಿದ್ದು ಅದು ಒಂದು ಹಳ್ಳಿಗೆ ಮಾತ್ರ ಸಂಬಂಧಿಸಿದ್ದು, ಸಮಗ್ರವಾಗಿ ಅಂದರೆ ಎಲ್ಲಾ ಹರಿಜನರಿಗೂ ಸಂಬಂಧಿಸಿದಂತೆ ಒಂದು ಅಡ್ಜರ್ನ್ ಮೆಂಟ್ ಮೋಷನ್ ಕೊಟ್ಟಿದ್ದೆ.

ಅಧ್ಯಕ್ಷರು.—ಅದನ್ನು ಕಾಲಿಂಗ್ ಅಟ್ಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಬೇರೆ, ತಾವು ಕನ್‌ವರ್ಟ್ ಮಾಡಿದನ್ನು ಒಪ್ಪಿದ್ದೇನೆ. ನಿನ್ನೆ ಸಾಯಂಕಾಲ ೫ ಘಂಟೆಗೆ ಐದಾರು ಸದಸ್ಯರ ಸಿಗ್ನೇಚರ್ ಹಾಕಿಸಿ ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಾಳೆ ಉತ್ತರ ಕೊಡಿಸುತ್ತೇನೆ. ಇವತ್ತು ೪ ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಳನ್ನು ಇಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಕ್ಕೂ ಕಾಲಿಂಗ್ ಅಟೆನ್‌ಷನ್ ಆಗಿ ಉತ್ತರ ಕೊಡಿಸುತ್ತೀರಾ ?

ಅಧ್ಯಕ್ಷರು.—ವಿವರವಾದ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೆಂಡಿಗೆರೆಯಲ್ಲಿ ನಡೆದದ್ದು ಬೇರೆ ನಾನು ಹೇಳುತ್ತಿರುವುದು ಬೇರೆ. ಚಿಕ್ಕೋಡಿ ಹತ್ತಿರ ಇರತಕ್ಕ ಬಿದ್ರೋಳಿಯಲ್ಲಿ ಕೆಲವರು ಕಳ್ಳತನ ಮಾಡಿದ್ದಾರೆ ಎನ್ನುವ ಆಪಾದನೆ ಮೇಲೆ ಅವರಿಗೆ ಮಲಮೂತ್ರ ತಿನ್ನಿಸತಕ್ಕ ಶಿಕ್ಷೆ ಮಾಡಿದರೆ ಈ ದೇಶದಲ್ಲಿ ಪ್ರಜೆಗಳು ಹೇಗೆ ಬದಕಬೇಕು ? ಈ ಜನರಿಗೆ ರಕ್ಷಣೆ ಕೊಡುವವರು ಯಾರೂ ಇಲ್ಲ ಕೇಳುವವರು ಯಾರೂ ಇಲ್ಲ, ರೂಲ್ಸ್ ಪ್ರಕಾರ ನಾನು ನಿನ್ನೆ ಸಾಯಂಕಾಲ ೫ ಘಂಟೆಗೆ ಒಟ್ಟು ೭ ಜನರು ಸಹಿ ಹಾಕಿ ಬರೆದಂ ಕೊಟ್ಟಿದ್ದೇವೆ. ಇದರ ಬಗ್ಗೆ ಚರ್ಚೆಯಾಗಬೇಕು. ಶೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ಅನ್ಯಾಯವಾಗುತ್ತಿರುವ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನಾಳೆ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಯಮ ೧೫೯ ಪ್ರಕಾರ ನೋಟೀಸ್ ಕೊಟ್ಟಿದ್ದೇವೆ.